ದೇವಪ್ಪ ಬಂದಿರಲಿಲ್ಲ. ಆ ದಿನ.. ಮಾದೇವಿ ಕೆಲಸ ಮುಗಿಸಿಕೊಂಡು ಸಂಜೆ ತನ್ನ ಗುಡಿಸಲಿನ ಮುಂದೆ ಆರಾಮವಾಗಿ ಕಾಲು ಚಾಚಿ ಕುಳಿತಿದ್ದಳು. ಮುಂದೆಲ್ಲ ನೆರೆಕೆರೆಯ ಮಕ್ಕಳು ಕಣ್ಣು ಮುಚ್ಚಾಲೆ ಆಟ ಆಡುತ್ತಿದ್ದವು. 'ಕಣ್ಣಾ ಮುಚ್ಚೇ ಕಾಡೇಗೂಡೇ.. ಉದ್ದಿನ ಮೂಟೆ ಉರುಳೇಹೋಯ್ತು. ನಮ್ಮಯ ಹಕ್ಕಿ ಬಿಟ್ಟೆ..ಬಿಟ್ಟೆ. ನಿಮ್ಮಯ ಹಕ್ಕಿ ರಕ್ಷಿಸಿಕೊಳ್ಳಿ'ಎಂದು ಒಬ್ಬ ಕೂಗಿದಾಗ ಎಲ್ಲರೂ ಅಡಗಿಕೊಂಡಿದ್ದರು. ಆಗಲೇ ಸೋಜಪ್ಪ ನಂಜುಂಡನನ್ನು ಕೇಳಿಕೊಂಡು ಮನೆಯ ಬಳಿ ಬಂದಿದ್ದರು. ಮಾದೇವಿಗೆ ಎದೆಯಲ್ಲಿ ಪುಕಪುಕ ಆರಂಭವಾಗಿತ್ತು. ಕೆಲಸದಿಂದ ಬಂದ ನಂತರ ಕಳಿಸಲು ಹೇಳಿದರು. ದೇವಪ್ಪನ ಹೆಂಡತಿಗೂ ಹಾಗೇ ಹೇಳಿದರಂತೆ.

ದಿನಗಳು ಉರುಳುತ್ತಿದ್ದವು. ನಂಜುಂಡನ ಕೆಲಸ ನಡೆಯುತ್ತಲೇ ಇತ್ತು. ಒಮ್ಮೆ ಬಂದು ಒಂದೇ ದಿನವಿದ್ದು ಹೊರಟಿದ್ದ. ಆಕ್ಷೇಪಿಸಿದ ಮಾದೇವಿಗೆ, 'ಕೆಲಸ ಸಿಕ್ಕಿರೋದೇ ಹೆಚ್ಚು. ಒಮ್ಮೆ ಮುಗಿಸಿಕೊಂಡು ಬಂದ್ರೆ ಕೈಯಲ್ಲಿ ದುಡ್ಡಾಯ್ತದೆ. ಸುಮ್ಕಿರು' ಎಂದಿದ್ದ. ಇತ್ತ ಚುನಾವಣೆಯ ಕಾವು ಏರುತ್ತಿತ್ತು. ಇಷ್ಟು ದಿನ ಹಳ್ಳಿಯವರಿಗೆ ಗೌಡರು ಯಾರಿಗೆ ಹೇಳುತ್ತಾರೋ ಅವರಿಗೆ ಓಟು ಹಾಕಿ ಗೊತ್ತು. ಈ ಬಾರಿ ಸ್ಪರ್ಧೆ ಜೋರಾಗಿತ್ತು. ಸೋಜಪ್ಪ ಒಬ್ಬ ಅಭ್ಯರ್ಥಿಯೊಂದಿಗೆ ಕೇರಿಗೆ ಬಂದಿದ್ದರು. 'ನೀವೆಲ್ಲ ಇವರಿಗೇ ಓಟು ಹಾಕಿ. ನಂಜುಂಡ ಬಂದ ನಂತರ ಹೇಳಿ.. ಆಯ್ತಾ?'ಎಂದು ಹೇಳಿ ಹೋಗಿದ್ದರು. ಅವಳು ಗೌಡರ ಮನೆಯಿಂದ ಕೆಲಸ ಮುಗಿಸಿಕೊಂಡು ಬರುವಾಗ ಅಭ್ಯರ್ಥಿಗೆ, 'ಈ ಕೇರಿಯವರನ್ನೆಲ್ಲ ಸರಿ ಮಾಡಿಕೊಂಡಿದ್ದೇವೆ. ಇಲ್ಲಿಂದ ಒಟ್ಟು ಐವತ್ತರಿಂದ ಅರವತ್ತು ಓಟುಗಳು ಬರಬಹುದು. ನಾವು ಯಾರಿಗೆ ಹೇಳುತ್ತೇವೋ..ಅವರಿಗೇ ಹಾಕುತ್ತಾರೆ. ಚಿಂತೆ ಮಾಡಬೇಡಿ. ನೀವು ಉಳಿದದ್ದಕ್ಕೆಲ್ಲಾ ವ್ಯವಸ್ಥೆ ಮಾಡಿ. ಹೆಂಗಸರಿಗೆ ಸೀರೆ.. ಗಂಡಸರಿಗೆ ಮಾಮೂಲಿ ಇತ್ಯಾದಿ'ಎಂದು ಹೇಳುತ್ತಿದ್ದರು. ಮರುದಿನ ಮಾದೇವಿಯನ್ನು ಕರೆದ ಗೌಡರು, 'ನಂಜುಂಡ ಸೋಜಪ್ಪನ ತಾವ ದುಡ್ಡು ಈಸ್ಕೊಂಡಿದಾನಾ?' ಎಂದು ಕೇಳಿದರು. ಮಾದೇವಿ ಮೌನವಾಗಿ ಕತ್ತಾಡಿಸಿದ್ದಕ್ಕೆ, 'ಅದ್ಯಾಕೆ ಅವನ ತಾವ ಹೋಗಿದ್ದು? ಕಷ್ಟ ಅಂತ ಕೇಳಿದ್ರೆ ನಾನ್ ಕೊಡ್ತಾ ಇರಲಿಲ್ಲವಾ?'ಎಂದು ಕೇಳಿದರು. ಮಾದೇವಿ ಮಾತನಾಡದೇ ಸುಮ್ಮನೆ ಗೌಡತಿಯ ಮುಖ ನೋಡಿದಳು. ಗೌಡರಿಗೆ ಗೊತ್ತಾಗಿ ಹೋಯ್ತು. 'ನಿನ್ನ ಕೆಲಸಾನಾ ಇದು? ನನ್ನ ತಾವ ಯೋಳಕ್ಕೂ ಆಗಲಿಲ್ವಾ ನಿಂಗೆ? ನಿಂದೇ ಅಧಿಕಾರ ಆಗೋಯ್ತಾ? ಈಗ ನೋಡು.. ಸೋಜಪ್ಪನ ತಾವ ಕಷ್ಟಕ್ಕೆಂತ ದುಡ್ಡು ಈಸ್ಕೊಂಡಿದ್ದಕ್ಕೆ ತಮ್ಮ ಧರ್ಮಕ್ಕೆ ಸೇರು ಅಂತಾರೆ. ಎಷ್ಟು ಜನ ಅಂಗೆ ಹೋಗ್ತವ್ರೆ ಗೊತ್ತಾ?'ಎನ್ನುತ್ತ ಕೋಪದಿಂದ ಹೆಂಡತಿಯ ಮುಖ ನೋಡಿದರು. ಗೌಡತಿ ತಲೆಯ ಮೇಲೆ ಸೆರಗೆಳೆದುಕೊಂಡು ಮೌನವಾಗಿ ಒಳಗೆ ಹೋದಳು.

ನಾಲ್ಕು ದಿನಗಳು ಕಳೆದಿದ್ದವು. ನಂಜುಂಡ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ. ಚೆನ್ನಾಗಿ ದುಡ್ಡೂ ತಂದಿದ್ದ. ಜೊತೆಗೆ ಹೆಂಡತಿಗೆ ಸೀರೆ, ಮಗನಿಗೆ.. ತನಗೆ ಬಟ್ಟೆಗಳೂ ಬಂದಿದ್ದವು. ಹೊಸ ಮೊಬೈಲ್ ಕೂಡ ಬಂದಿತ್ತು. ಊಟ ಮುಗಿಸಿಕೊಂಡು ಸೋಜಪ್ಪರ ತಾವ ಹೋಗಿ ಅವರ ಬಾಕಿ ಕೊಡಾಣ ಅಂತಲೇ ದೇವಪ್ಪನೊಡನೆ ಮಾತಾಡಿಕೊಂಡಿದ್ದ. ಅಷ್ಟರಲ್ಲೇ ಬಸನಿಂಗನೂ ಬಂದ. ಅವನೂ ಸಂಬಳ ತಂದಿದ್ದ. ಕೆಲಸ ಕಾಯಮ್ಮಾಗಿತ್ತು. ಮಾದೇವಿಗೆ ಸಂತಸ ದುಪ್ಪಟ್ಟಾಯಿತು.

ಬಾಡೂಟವಾಯಿತು. ಬಸನಿಂಗನ ಮಾತುಗಳನ್ನೆಲ್ಲ ಕೇಳಿದ್ದಾಯಿತು. 'ಇನ್ ಮ್ಯಾಕೆ ನೀವು ಕಷ್ಟಪಡೋದು ಬ್ಯಾಡ. ದಾವಣಗೆರೆಲೇ ಮನೆ ಮಾಡಣ. ನಂಗೆ ತಿಂಗಳಿಗೆ ಹತ್ತು ಸಾವ್ರ ಕೊಡ್ತಾರೆ. ಈಗ ಮೂರು ತಿಂಗಳ ಸಂಬಳ ಹದಿನೆಂಟು ಸಾವ್ರ ಕೊಟ್ಟವ್ರೆ. ಮೂವರೂ ಆರಾಮಾಗಿರಣ'ಎಂದು ಹೇಳಿದ್ದೇ ಮಾದೇವಿಯ ಕಣ್ಣುಗಳು ಸಂತಸದಿಂದ ತುಂಬಿಕೊಂಡವು. ನಂಜುಂಡನಿಗೂ ಅಷ್ಟೇ ಆನಂದವಾಗಿತ್ತು. 'ಹೌದು ಕಣ್ಲಾ. ಎಲ್ಲಕ್ಕೂ ಮೊದಲು ಸೋಜಪ್ಪರ ದುಡ್ಡು ಕೊಟ್ಟುಬಿಡಾಣ. ಪಾಪ.. ಇಷ್ಟು ದಿನ ಒಂದ ಮಾತೂ ಹೇಳ್ದೆ ಕಾಯ್ದವ್ರೆ. ಕೇಳ್ಲೂ ಇಲ್ಲ'ಎಂದ. ಗಾಬರಿಗೊಂಡ ಬಸನಿಂಗ 'ಸೋಜಪ್ಪರ ಬಳಿ ನೀವ್ಯಾಕೆ ದುಡ್ಡು ಈಸ್ಕೊಂಡಿದ್ರಿ?'ಎಂದು ಕೇಳಿದಾಗ ವಿಷಯವನ್ನು ನಂಜುಂಡ ಸಾದ್ಯಂತವಾಗಿ ವಿವರಿಸಿದ. ಮಾದೇವಿ, 'ಹೌದು.. ಹೌದು..' ಎಂದು ತಲೆಯಾಡಿಸುತ್ತಿದ್ದಳು. 'ನಿನ್ನ ಫೀಸಿಗೆ.. ಮಾದೇವಿಯ ಆಸ್ಪತ್ರೆ ಖರ್ಚಿಗೆ.. ಗುಡಿಸಲ್ವಾಗೆ ಹರಕೆ ಕಟ್ಕೊಂಡಾಗ.. ಎಲ್ಲ ಅವರೇ ಕೊಟ್ಟವ್ರೆ. ಭೋ